IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
*Research Paper* **© 2012 IJFANS. All Rights Reserved** UGC CARE Listed ( Group -I) Journal Volume 11, Iss 04, 2022

# ಪುರಂದರದಾಸರ ಕೀರ್ತನೆಯಲ್ಲಿ ಸಾಮಾಜಿಕ ವಿಡಂಬನೆ

Dr Vijayanand A wagge, Associate professor in Kannada, HRSM college Gangavathi Saraswati giri anegundi Road Gangavathi.

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗಮನಿಸಿದಾಗ ಒಂದೊಂದು ಸಾಹಿತ್ಯದ ಪ್ರಕಾರಗಳಲ್ಲಿ ಒಬ್ಬೊಬ್ಬ ರಾಯಬಾರಿಗಳು ಕಂಡುಬರುತ್ತಾರೆ. ಚಂಪುವಿಗೆ ಪಂಪ, ರಗಳೆಗೆ ಹರಿಹರ, ಷಟ್ಪದಿಗೆ ಕುಮಾರವ್ಯಾಸ, ವಚನ ಸಾಹಿತ್ಯಕ್ಕೆ ಮಹಾತ್ಮ ಬಸವಣ್ಣ ಹೇಗೊ ಕೀರ್ತನ ಸಾಹಿತ್ಯಕ್ಕೆ ಪುರಂದರದಾಸರು ಮತ್ತು ಕನಕದಾಸರು ಮುಖ್ಯರು ರಾಯಬಾರಿಗಳು. ವ್ಯಾಸರಾಯರ ಶಿಷ್ಯರಾಗಿ ಮಿನುಗಿದ ನಕ್ಷತ್ರಗಳಲ್ಲಿ ಪುರಂದರ ದಾಸರು ಮತ್ತು ಕನಕದಾಸರು ಮಾತ್ರ ಮುಖ್ಯರು. ಅಲ್ಲದೇ ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಇವರಿಬ್ಬರೂ ಪ್ರಖ್ಯಾತಿಗೊಂಡಿದ್ದಾರೆ. ಇವರಿಬ್ಬರ ಸಾಧನೆ ಕೀರ್ತನೆ ಸಾಹಿತ್ಯಕ್ಕೆ ವಿಶೇಷ ಅಮೋಘ.

ಪುರಂದರದಾಸರು ಕ್ರಿ.ಶ. 1480 ರಿಂದ ಕ್ರಿ.ಶ. 1565 ರ ವರೆಗೆ ಸುಮಾರು 85 ವರ್ಷಗಳಷ್ಟು ಸುಧೀರ್ಘಕಾಲ ಬದುಕಿರಬಹುದೆಂದು ತಿಳಿದುಬರುತ್ತದೆ. ಇವರ ಪೂರ್ವಾಶ್ರಮದ ಹೆಸರು ಶ್ರೀನಿವಾಸ ನಾಯಕ, ಶೀನಪ್ಪನಾಯಕ, ಕೃಷ್ಣಪ್ಪನಾಯಕರೆಂದು ಕೆಲವರು ಅಭಿಪ್ರಾಯಿಸುವಂತೆ ಇನ್ನೂ ಕೆಲವರು ಈ ಹೆಸರುಗಳಲ್ಲದೆ ಬೇರೊಂದು ಹೆಸರು ಪುರಂದರದಾಸರಿಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ತಂದೆ ಪುರಂದರ ಘಡದ 'ವರದಪ್ಪನಾಯಕ' ತಾಯಿ 'ಲಕ್ಷ್ಮಿದೇವಿ; ಹೆಂಡತಿ ಸರಸ್ವತಿ ಬಾಯಿಯೆಂದು ನವಕೋಟಿ ನಾರಾಯಣವೆನಿಸಿದ ಪುರಂದರದಾಸರು ಹೆಂಡತಿ ಸರಸ್ವತಿಬಾಯಿಯ ದೈವ ಭಕ್ತಿಯ ಪ್ರಭಾವದಿಂದ ಬದುಕಿನಲ್ಲಿ ಬದಲಾವಣೆಗೊಂಡು ಜ್ಞಾನೋದಯ ಪಡೆದುಕೊಂಡು ಸಕಲ ಸಂಪತ್ತು ದಾನಮಾಡಿ ವ್ಯಾಸರಾಯರಿಂದ ದೀಕ್ಷೆಪಡೆದು ಹರಿಭಕ್ತರಾದರೆಂದು ಕೆಲವು ಮಾಹಿತಿಗಳ ಪ್ರಕಾರ ತಿಳಿದುಬರುತ್ತದೆ. ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ 'ಆದದ್ದೆಲ್ಲ ಒಳಿತೇ ಆಯಿತು' ನಮ್ಮ ಶ್ರೀಧರನ ಸೇವೆಗೆ ಸಾಕಾರವಾಯಿತೆಂದು ಇದಕ್ಕೆ ಕಾರಣವಾದ ತಮ್ಮ ಹೆಂಡತಿ ಸರಸ್ವತಿಬಾಯಿಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಪುರಂದರ–ವಿಠಲನೆಂಬ ಅಂಕಿತನಾಮದಲ್ಲಿ ಕೀರ್ತನ ಕೈಂಕರ್ಯವನ್ನು ನೆರವೇರಿಸಿದ್ದಾರೆ. ಇವರ ಸಾಧನೆ ಮೆಚ್ಚಿಕೊಂಡ ಗುರುಗಳಾದ ವ್ಯಾಸರಾಯರು "ದಾಸರೆಂದರೆ ಪುರಂದರ ದಾಸರಯ್ಯ" ಎಂದು ಬಾಯಿತುಂಬಾ ಹೊಗಳಿದ್ದಾರೆ. ಇವರ ಕೀರ್ತನೆಗಳನ್ನು ಪುರಂದರೋಪನಿಷತ್ತು ಎಂದು ಗೌರವಿಸಲಾಗಿದೆ. ಪುರಂದರ ದಾಸರೇ ಹೇಳಿಕೊಂಡಂತೆ ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರ ಕೀರ್ತನೆಗಳು ರಚನೆ ಮಾಡಿರುವರೆಂದು ಪ್ರಸ್ತಾಪಿಸಿದ್ದಾರೆ. ಆದರೆ ಸಧ್ಯಕ್ಕೆ ಉಪಲಬ್ಧವಾದದ್ದು ಒಂದು ಸಾವಿರಕ್ಕೂ ಹೆಚ್ಚು ಕೀರ್ತನೆಗಳು ಮಾತ್ರ.

ಪುರಂದರದಾಸರು ಪುರಂದರಘಡದವರೆ ಅಥವಾ ಬೇರೆ ಊರಿನವರೆ ಎಂಬುದರ ಬಗ್ಗೆ ಜಿಜ್ಞಾಸೆ ಇದೆ. "ಭಕ್ತಿ ಲೀಲಾಮೃತ' ವೆಂಬ ಮರಾಠಿ ಕೃತಿಯೊಂದರಲ್ಲಿ ಬೀದರದ ವಿಠಲ ಪುರಂದರನೆಂಬ ವ್ಯಕ್ತಿಗೆ ಸಂಬಂಧಿಸಿದಂತೆ ವಿಷಯ ಒಳಗೊಂಡಿದೆ. ಬೀದರನಲ್ಲಿದ್ದ ವಿಠಲಪುರಂದರನೆಂಬ ಸಂತನಿಗೂ ಪುರಂದರದಾಸರಿಗೂ ಸಂಬಂಧವಿತೆ? ಅಥವಾ ಬೀದರದ ವಿಠಲಪುರಂದರನೇ ಕನ್ನಡದ ಪುರಂದರದಾಸನೆ ಈ ವಿಷಯಗಳ ಬಗೆಗೆ ನಿರ್ಣಯ ತೆಗೆದುಕೊಳ್ಳಲು ಆಧಾರಗಳು ಸಾಲದಾಗಿವೆ" [ಬಸವೇಶ್ವರ ಮತ್ತು ಪುರಂದರದಾಸ ಪು. ಸಂಖ್ಯೆ. 37 ಬಸವರಾಜ ಸಬರದ]

ISSN PRINT 2319 1775 Online 2320 7876
*Research Paper* **© 2012 IJFANS. All Rights Reserved** UGC CARE Listed ( Group -I) Journal Volume 11, Iss 04, 2022

ಕರ್ನಾಟಕ ಸಂಗೀತ ಪಿತಾಮಹರಾದ ಪುರಂದರದಾಸರು ಜನಿಸಿದ್ದು ಪುರಂದರಘಡವೆಂದು ಹಲವು ವಿದ್ವಾಂಸರ ವಾದ ವಾದರೆ ಅಲ್ಲ ವೆನ್ನುವುದು ಕೂಡ ಹಲವರ ವಾದ. ಹೆಸರಿನ ಸಾಮ್ಯವೊಂದಲ್ಲದೆ ಶ್ರೀ ಪುರಂದರರ ಊರು ಪುರಂದಗಡ ಎನ್ನುವುದಕ್ಕೆ ಯಾವ ಆಧಾರವು ಇಲ್ಲ. ಪುರಂದರಘಡ ಇಂದು ಮಹಾರಾಷ್ಟ್ರದಲ್ಲಿದೆ; ಕನ್ನಡವೇ ಬರದ ಆ ಊರಿನಲ್ಲಿ ಪುರಂದರದಾಸರು ಜನಿಸಿರಲಿಕ್ಕಿಲ್ಲವೆನ್ನುವುದು ಒಂದು ತರ್ಕ.

"ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಿರುವ ಜಾಣರೆಲ್ಲ ಹಗರಣ ಮಾಡುವುದನೆ ಕಂಡು"

ಬುದ್ಧಿವಂತರೆನಿಸಿಕೊಂಡವರ ಬದುಕಿನ ತೆರೆಮರೆಯಲ್ಲಿ ನಡೆಯುವ ಅನೈತಿಕ ಅನಾಚಾರಗಳು ಹೇಗೆ ನಡೆಯುತ್ತವೆನ್ನುವುದನ್ನು ವ್ಯಕ್ತಪಡಿಸಿದ್ದಾರೆ. ಒಳ್ಳೆಯ ಸಂಗತಿಗಳು ನಮ್ಮ ಮನಸ್ಸನ್ನು ಹೇಗೆ ಆಕರ್ಷಿಸುತ್ತವೆಯೋ ಅದರ ಜೊತೆಗೆ ಕೆಟ್ಟ ಸಂಗತಿಗಳು ಕೂಡ ತಮ್ಮ ಸ್ವರೂಪ ತೋರಿಸುವ ಮೂಲಕ ಲೋಕದಲ್ಲಿ ನಡೆಯುವ ನಡೆಯಬಾರದ ಸಂಗತಿಗಳು ನಿರ್ಮಿಸಿ ಬಿಡುತ್ತವೆ. ಮುಂದುವರೆದು ಗಂಡ ಪರಸತಿಗೆ, ಹೆಂಡತಿ ಪರಪುರುಷನಿಗೆ ಆಕರ್ಷಣಿಯವಾದಾಗ ಮಾನವೀಯ ಮೌಲ್ಯಗಳು ಬದುಕಿನಲ್ಲಿ ಗೌಣವಾದಾಗ ಚುರುಕು ಮುಟ್ಟಿಸುವ ಕಾರ್ಯದ ಗುಣವಿದೆ. ಈ ರೀತಿಯ ಅನೈತಿಕ ಅನಾಚಾರ ವ್ಯಕ್ತಿಗಳ ಬಗೆಗೆ ಕಳೆದು ಹೋಗುತಿರುವ ಮೌಲ್ಯಗಳ ಬಗ್ಗೆ ನೈತಿಕ ಜವಾಬ್ದಾರಿಯಿದೆ.

"ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಹರಿಭಕ್ತರು ಪೇಳಿ ಮತ್ತಿದನು"

ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಮಾನವೀಯ ಸಂಬಂಧದ ಮೌಲ್ಯಗಳು ಬತ್ತಲೆಯಾಗಿವೆ. ಜಾತಿ, ಧರ್ಮ, ಸಮಾಜ, ಸಮುದಾಯಗಳೆಂದು ವಿಂಗಡಿಸಿ ಮನುಷ್ಯತ್ವದ ಬದುಕಿನ ಬುಡಕ್ಕೆ ಕೊಳ್ಳಿ ಇಟ್ಟಿದೆ. ಸಂತೋಷವಾಗಿ ಬದುಕಬೇಕಾದ ಬುದ್ಧಿವಂತ ಪ್ರಾಣಿಗಳು ಅನಾಗರಿಕರಾಗಿದ್ದಾರೆ. ಹುಟ್ಟು ಮತ್ತು ಸಾವು ನಿಶ್ಚಿತ ಇರುವಷ್ಟು ದಿವಸಗಳು ಪರಸ್ಪರ ಒಪ್ಪಿಕೊಂಡು ಬದುಕಬೇಕಾದವರು ಕಗ್ಗತಲೆಯ ಕರಿಮೋಡದಲ್ಲಿ ಕಳಚಿ ಕಾಣದೇ ಇರುವ ದೇವರನ್ನು ಬದುಕಿನ ತುಂಬಕಟ್ಟಿ ತಲೆಯಿಂದ ಹುಟ್ಟಿದ, ಬುಜದಿಂದ ಹುಟ್ಟಿದ, ಟೊಂಕದಿಂದ ಹುಟ್ಟಿದ, ಪಾದದಿಂದ ಹುಟ್ಟಿದನೆಂದು ಅವುಗಳಿಗೆ ಒಂದೊಂದು ಜಾತಿ, ವರ್ಗಗಳ ಬಣ್ಣಕಟ್ಟಿ ದಿನವಿಡೀ ಕಚ್ಚಾಡಿ ಸಾಯುತ್ತಿರುವುದು ಶೋಚನೀಯವಾಗಿದೆ. ದಾಸಶ್ರೇಷ್ಠ ಪುರಂದರದಾಸರ ಈ ಕೀರ್ತನೆ ನಮ್ಮನ್ನು ಬೇರೆ ಕಡೆಗೆ ತಿರುಗಿಸಿಬಿಡುತ್ತದೆ. ಪುರಂದರದಾಸರ ಪ್ರಕಾರ 'ಹೊಲೆಯ'ವೆಂದರೆ ಇಲ್ಲಿ ಜಾತಿ ಸೂಚಕವಲ್ಲ. ನಡೆ ನುಡಿಯಿಂದ ಹೊಲೆತನ ಬರುವುದೆ ವಿನಃ ಹುಟ್ಟಿನಿಂದಲ್ಲವೆಂದು ಪ್ರತಿಪಾದಿಸುತ್ತಾರೆ. 'ಹೊಲೆಯ' ಎಂಬ ಶಬ್ದದ ಅರ್ಥದ ಕಡೆಗೆ ಅವರ ದೃಷ್ಟಿಕೋನವಿದೆ ಹೊರತು ಜಾತಿಯಿಂದ ಹೊಲೆಯರನ್ನು ಪ್ರಶ್ನಿಸಿಲ್ಲ. ಮಹಾತ್ಮ ಬಸವಣ್ಣ ಕೂಡ ಇದೇ ಅರ್ಥದಲ್ಲಿ ಪ್ರತಿಪಾದಿಸಿರುವಂತದ್ದು. ಕೊಲುವನೇ ಮಾದಿಗ ಹೊಲಸು ತಿಂಬುವನೇ ಹೊಲೆಯನೆಂದು. ಜಾತ್ಯಾತೀತ ಸಮಾಜದ ಪರಿಕಲ್ಪನೆ ಬಸವಣ್ಣನವರ ಭಾವದ ಕೂಸು. ಕನಕದಾಸರಂತು ಜಾತಿ ಮತ್ತು ಧರ್ಮ ವ್ಯವಸ್ಥೆಯ ವಿರುದ್ಧ ನೇರವಾಗಿ ಬಂಡಾಯ ಮೊಳಗಿದ್ದಾರೆ.

"ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ
ಕುಲ ಕುಲ ವೆಂದು ಹೊಡೆದಾಡಿದಿರಿ"

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 04, 2022

ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ ಎಂದು ಪ್ರಶ್ನಿಸುತ್ತಾರೆ. ಭಾರತೀಯ ಸಮಾಜದಲ್ಲಿ ಶತಶತಮಾರ್ಗಳಿಂದಲೂ ಬೇರುಬಿಟ್ಟಿರುವ ಜಾತಿ–ಧರ್ಮ, ಮೇಲು–ಕೀಳು, ಬಡವ–ಬಲ್ಲಿದಗಳೆಂಬ ತಾರತಮ್ಯಗಳು ಮಾನವ ಧರ್ಮವನ್ನೇ ನುಂಗಿಬಿಟ್ಟಿದೆ ಎನ್ನುವುದರ ಜೊತೆಗೆ ಜಾತಿ ಮತ್ತು ಧರ್ಮದ ಮೂಲವನ್ನೇ ಪ್ರಶ್ನಿಸುತ್ತಾರೆ.

" ದಂಡದೋಷಕೆ ಉಂಟು ಪುಂಡುಪೋಕರಿಗುಂಟು
ಹೆಂಡಿರ ಮಕ್ಕಳಿಗಿಲ್ಲ ಪೀ ಕಲಿಕಾಲ
ಭಂಡೆಯರಿಗುಂಟು ಮಿಂಡೆಯರಿಗುಂಟು –ಬೇಡಿ
ಕೊಂಡವರಿಗಿಲ್ಲ ಈ ಕಲಿಕಾಲ
ಒತ್ತೆ ಸೂಳೆಗುಂಟು ಮತ್ತು ಹಾದರಕುಂಟು
ಹೆತ್ತ ತಾಯಿಗಿಲ್ಲ ಈ ಕಲಿಕಾಲ"

ಸಮಾಜದ ಅಂದಿನ ಜನಜೀವನವನ್ನು ಅರ್ಥೈಸಿಕೊಂಡ ಪುರದಂರದಾಸರು ನೇರವಾಗಿ ವಿಡಂಬನೆಮಾಡಿದ್ದಾರೆ. ಕಲಿಕಾಲದಲ್ಲಿ ಸತ್ಯಕ್ಕೆ ಬೆಲೆಯಿಲ್ಲದಂತಾಗಿ ಅನ್ಯಾಯ, ಅಸತ್ಯ, ಅನಾಚಾರಗಳು ದಿನನಿತ್ಯ ರಾಕ್ಷಸಿಯ ರೂಪದಲ್ಲಿ ತಾಂಡವಾಡುತ್ತಿವೆಯೆಂದು ನೊಂದುಕೊಂಡು ಹೇಳಿದ್ದಾರೆ. ಭಂಡರಿಗೆ ಮಿಂಡೆಯರಿಗೆ ತಲೆ ತೂಗುವ ಈ ಕಾಲದಲ್ಲಿ ಜನ್ಮಕೊಟ್ಟ ತಾಯಿಯನ್ನು ಕಸದಕ್ಕಿಂತ ಕಡೆಯಾಗಿ ಕಾಣುವಂತ ಭಂಡ ಮಕ್ಕಳಿರುತ್ತಾರೆ ಎಂದು ನೇರವಾಗಿ ಹೇಳುವ ಮೂಲಕ ಸತ್ಯದ ದರ್ಶನವನ್ನು ತಮ್ಮ ಕೀರ್ತನದ ಮೂಲಕ ಮಾಡಿಸುತ್ತಾರೆ.

"ಮಡಿ ಮಡಿ ಮಡಿಯೆಂದು ಮುಮ್ಮಾರು ಹಾರುತಿ
ಮಡಿಯೆಲ್ಲಿ ಬಂದಿತೊ ಬಿಕನಾಸಿ
ಎಲುವು ಚರ್ಮ ಮಲಮೂತ್ರ ಗುಂಡಿಯಲ್ಲಿ
ನಲಿಯುತ ನಿಂತೆಯೋ ಬಿಕನಾಸಿ
ನೆಲೆಗೊಂಡ ನವದ್ವಾರದ ಹೊಲೆಯೊಳು
ಅಳುತ ನೀ ಬಿದ್ದೆ ಬಿಕನಾಸಿ"

ವರ್ಣಾಶ್ರಮದ ಹೆಸರಿನಲ್ಲಿ ಸಮಾಜವನ್ನು ಹಾಳು ಮಾಡುವ ಮತ್ತು ತಮ್ಮ ಸಂತೋಷ ಸುಖವನ್ನು ಕಾಣುವ ಸ್ವಾರ್ಥಿಗಳನ್ನು ಮಡಿವಂತಿಕೆಯನ್ನು ಪ್ರದರ್ಶಿಸಿ ಸಾಮಾನ್ಯ ಜನರನ್ನು ಮರುಳು ಮಾಡುವ ಮೂರ್ಖರನ್ನು ಕುರಿತು ಇಲ್ಲಿ ತೀವ್ರವಾಗಿ ವಿಡಂಬಿಸಿದ್ದಾರೆ. ಅಂತವರನ್ನು ನೇರವಾಗಿ ಪುರಂದರದಾಸರು 'ಬಿಕನಾಸಿ' ಎಂದು ಕರೆಯುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಬಿಡದೆ ಬಟ್ಟೆಯನ್ನು ನೀರಿನಲ್ಲಿ ತೊಯಿಸಿ ಒಣಗಿಸಿ ಉಟರೆ ಮಡಿಯಾಗುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಪರಧನ, ಪರಸತಿಯರನ್ನು ನೋಡದೆ ಮನದೊಳಗಿರುವ ಅಹಂಕಾರವನ್ನು ಬಿಟ್ಟು ಜೀವನದಲ್ಲಿ ನಡೆದಾಗ ಮಾತ್ರ ನಿಜವಾದ 'ಮಡಿ' ಎಂದು ಸಾರಿ ಸಾರಿ ಹೇಳುತ್ತಾರೆ.

ಮಾನವರಾಗಿ ಹುಟ್ಟಿದ ಮೇಲೆ ಮಾನವರಂತೆ ಬದುಕಬೇಕು ಜೀವನದ ಆದರ್ಶವನ್ನು ಪೂರ್ಣಗೊಳಿಸಬೇಕೆಂಬುದು ಪುರಂದರದಾಸರದು ಬಹುದೊಡ್ಡ ಅಪೇಕ್ಷೆ. ಅಂತೆಯೇ ಲೋಕದ ಜನರನ್ನು ಕುರಿತು ನೀತಿ ಬೋಧನೆಯನ್ನು ಮಾಡಿದ್ದಾರೆ. ಮನಸ್ಸು ಬುದ್ಧಿ ಹೃದಯಗಳ ಪ್ರಾಮುಖ್ಯತೆ ಕುರಿತು ತಿಳಿಸಿ ಪ್ರಾಣಿಗಳು ಮತ್ತು ಮನುಷ್ಯರಿಗಿರುವ ಅಂತರವನ್ನು ಸ್ಪಷ್ಟಪಡಿಸಿದ್ದಾರೆ. ಮಾನವ ಜನ್ಮ ದೊಡ್ಡದು ಅದನ್ನು ವ್ಯರ್ಥವಾಗಿ ಹಾಳು ಮಾಡಬೇಡಿರೆಂದು, ಮೂಢ ನೇಮಗಳನ್ನು ಆಚರಿಸುವದರಿಂದ 'ಮುಕ್ತಿ' ಸಿಗಲಾರದೆಂದು ಸರಳ ಭಕ್ತಿಯ ಕಡೆಗೆ

*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 11, Iss 04, 2022

ಮಹತ್ವ ನೀಡಿದ್ದಾರೆ. ಹೀಗೆ ದಾಸಶ್ರೇಷ್ಠ ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಮಾರ್ಮಿಕವಾಗಿ ಸಾಮಾಜಿಕ ವಿಡಂಬನೆ ಮಾಡಿದ್ದಾರೆ.